ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:1191/2024
ಸಿ.ಡಬ್ಲ್ಯು. 1 ಪಿ.ಡಬ್ಲೂ : 1

| | |
|---|---|
| ಸಾಕ್ಷಿದಾರರ ಹೆಸರು | ತಬಸ್ಸುಮ್ ಬೇಗಂ |
| ಗಂಡನ ಹೆಸರು | ಸೈಯ್ಯದ್ ಸಲೀಂ |
| ವಯಸ್ಸು | 35 ವರ್ಷ |
| ಉದ್ಯೋಗ | ಲೆಕ್ಚರರ್ |
| ವಾಸಸ್ಥಳ | ತೆಂಕ ಎರ್ಮಾಳು |

ದಿನಾಂಕಃ 16-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ಆರೋಪಿಯವರು ನನ್ನ ಗಂಡ. 06-11-2020 ರಂದು ಕಾರ್ಕಳದ ಜಾಮೀಯಾ  ಮಸೀದಿಯಲ್ಲಿ ನಮ್ಮ ಮದುವೆ ಆಗಿರುತ್ತದೆ. ಮದುವೆ ಸಮಯದಲಿಲ ಆರೋಪಿಯವರಿಗೆ 120 ಪವನ್ ಚಿನ್ನವನ್ನು ನೀಡಿರುತ್ತೇವೆ. ಸುಮಾರು 5 ಲಕ್ಷ ರೂಗಳಷ್ಟು ಮದುವೆ ಖರ್ಚು ಆಗಿರುತ್ತದೆ. ಮದುವೆಯ ನಂತರ ನಾನು ನನ್ನ ಗಂಡನೊಂದಿಗೆ ತೆಂಕ ಎರ್ಮಾಳಿನಲ್ಲಿ ವಾಸವಾಗಿದ್ದೆನು. ಆ ವೇಳೆ ನನ್ನ ಗಂಡನ ಇಬ್ಬರು ಮಕ್ಕಳು ನಮ್ಮೊಂದಿಗೆ ಇದ್ದರು. ಅವರ ಹೆಸರುಗಳೆಂದರೆ ಸೈಯ್ಯದ್ ಮಹಮ್ಮದ್ ಸಿಯಾನ್ ಮತ್ತು ಫಾತಿಮಾ  ಝಿಯಾ. ನನ್ನ ಮತ್ತು ಆರೋಪಿಯವರ ವೈವಾಹಿಕ ಜೀವನದಿಂದ ಸೈಯ್ಯದ್ ಮಹಮ್ಮದ್ ಸಫಾನ್ ಎಂಬ ಒಂದು ಗಂಡು ಮಗು ಜನಿಸಿತು. ಮದುವೆಯಾದಾಗಿನಿಂದ ಆರೋಪಿಯವರು ನನಗೆ ಕೆಟ್ಟ ಶಬ್ದಗಳಿಂದ ಬೈಯುವುದು ಮತ್ತು ಹೊಡೆಯುವುದು ಮಾಡುತ್ತಿದ್ದರು. ಆರೋಪಿಯವರಿಗೆ ಹಿಂದೆ ವಿವಾಹವಾಗಿ ವಿವಾಹ ವಿಚ್ಛೇದನೆ ಆಗಿತ್ತು.

ದಿಃ 03-02-2023 ರಂದು ನಾನು ನನ್ನ ಸಣ್ಣ ಮಗುವಿನೊಂದಿಗೆ ಆರೋಪಿಯವರ ಮನೆಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆರೋಪಿಯವರು ನನ್ನ ಕೂದಲನ್ನು ಹಿಡಿದು ದೂಡಿ ಹೊಡೆದರು. ಅಲ್ಲಿದ್ದವರು ನನ್ನನ್ನು ಹಿಡಿದುಕೊಂಡರು. ನನ್ನ ಬಾಯಲ್ಲಿ ರಕ್ತ ಬಂದಿತ್ತು. ಅದೇ ದಿನ ನನ್ನ ಮಗುವನ್ನು ಕರೆದುಕೊಂಡು ಪಡುಬಿದ್ರಿ ಪೊಲೀಸ್ ಠಾಣೆಗೆ ದೂರನ್ನು ನೀಡಲು ಹೋದೆನು. ಪೊಲೀಸಿನವರು ನಾನು ನೀಡಿದ ದೂರನ್ನು ಪಡೆದು ಆರೋಪಿಯವರನ್ನು ಠಾಣೆಗೆ ಕರೆಸಿದರು. ಆರೋಪಿಯವರು ನಾನು ಇನ್ನು ಮುಂದೆ ಬೈಯುವುದಿಲ್ಲ, ಹೊಡೆಯುದಿಲ್ಲ ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದು ಭರವಸೆಯನ್ನು ನೀಡಿ ದೂರನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಹೇಳಿದರು.

ಆದಾದ 2-3 ದಿನಗಳವರೆಗೂ ಸಹಜವಾಗಿ ಮನೆಯಲ್ಲಿ ಇದ್ದರು. ನಂತರ ಅವರ ತಂದೆ ತಾಯಿಯ ಮನೆಗೆ ಹೋಗಿ ವಾಸ ಮಾಡಲು ಹೋದರು. ಆರೋಪಿಯವರು ಸೈಯದ್ ಮಹಮ್ಮದ್ ಸಿಯಾನ್ ಅವರೊಂದಿಗೆ ಕರೆದುಕೊಂಡು ಹೋದರು. ಫಾತಿಮಾ ಝಿಯಾ ನನ್ನ ಜೊತೆ ಇದ್ದರು. ಮದುವೆಯ ಕಾಲದಲ್ಲಿ ನನಗೆ ನೀಡಿದ ಎಲ್ಲಾ ಆಭರಣಗಳು ಆರೋಪಿಯವರ ತಂದೆ ತಾಯಿಯ ಬಳಿ ಇದ್ದವು. ಅವರು ಅವುಗಳನ್ನು ಅಡಮಾನ ಮಾಡಿ ನಂತರ ಮಾರಾಟ ಮಾಡಿದರು.

ನಂತರ ದಿಃ 25-03-2023 ರಂದು ಸುಮಾರು 8 ಮಂದಿ ಮೂರು ಅಟೋಗಳಲ್ಲಿ ಸಂಜೆ 6.30 ರ ಸಮಯದಲ್ಲಿ ನಾನು ವಾಸವಾಗಿದ್ದ ಮನೆಯ ಬಳಿ ಬಂದರು. ಅಟೋದಲ್ಲಿ ಬಂದವರು ಮನೆಯ ಒಳಗೆ ಬಂದು ಕಾಲಿನಿಂದ ಒದ್ದು ಕೆಟ್ಟ ಕೆಟ್ಟ ಶಬ್ದಗಳಿಂದ ಮಾತನಾಡಲು ಶುರು ಮಾಡಿದರು.

ಆರೋಪಿಯವರು ಮನೆಯ ಬಾಗಿಲನ್ನು ಜೋರಾಗಿ ಬಡಿದು ನೀನು ಮನೆಯ ವಸ್ತುಗಳನ್ನು ಮುಟ್ಟುವ ಹಾಗಿಲ್ಲ ಮನೆಯಿಂದ ಹೊರಗೆ ಹೋಗಬೇಕೆಂದು ಹೇಳಿದರು. ನಾನು ಬಾಗಿಲನ್ನು ತೆಗೆಯಲಿಲ್ಲ. ಘಟನೆಯ ಬಗ್ಗೆ ನಮ್ಮ ಮನೆಯವರಿಗೆ ತಿಳಿಸಿದೆನು. ಅದೇ ದಿನ ರಾತ್ರಿ ಪಡುಬಿದ್ರಿ ಪೊಲೀಸ್ ಠಾಣೆಗೆ ಹೋಗಿದ್ದೆನು. ದಿಃ 02-05-2023 ರಂದು ಅವರ ವಿರುದ್ದ ಎಪ್ ಐ ಆರ್ ನೋಂದಣಿ ಆಯಿತು.

ದಿಃ 02-06-2023 ರಂದು ಪೊಲೀಸಿನವರು ಸ್ಥಳ ಪಂಚನಾಮೆ ಮಾಡಲು ಬಂದರು. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ಇದು ನಾನು ಆರೋಪಿಯವರ ವಿರುದ್ದ ನೀಡಿದ ಖಾಸಗಿ ದೂರು ಎಂದು ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿರುವ ಸಹಿಯನ್ನು ನೋಡಿ ಸಾಕ್ಷಿಯವರು ಗುರುತಿಸಿದ್ದು ಅದನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ದಿಃ 02-06-2023 ರಂದು ಮಾಡಿದ ಪಂಚನಾಮೆ ಎಂದು ಗುರುತಿಸಿದ್ದು ನಿಪಿ 2 ಎಂದು ಗುರುತಿಸಲಾಯಿತು. ನಿಪಿ 2 ಕ್ಕೆ ನಾನು ಸಹಿ ಮಾಡಿರುತ್ತೇನೆ. ನಿಪಿ 2 ರಲ್ಲಿರುವ ಸಹಿಯನ್ನು ಸಾಕ್ಷಿಯವರು ನೋಡಿ ಗುರುತಿಸಿದ್ದು ನಿಪಿ 2 ಎ ಎಂದು ಗುರುತಿಸಲಾಯಿತು.

ಸಾಕ್ಷಿಯವರು ಖಾಸಗಿ ದೂರಿನೊಂದಿಗೆ ಸಲ್ಲಸಿದ್ದ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 3 ರಿಂದ ನಿಪಿ 6 ಎಂದು ಗುರುತಿಸಲಾಯಿತು. ನಿಪಿ 3 ರಲ್ಲಿ ಕಾಣುವ ಆಭರಣಗಳು ನಾನು ಧರಿಸಿದ್ದ ನನ್ನ ಆಭರಣಗಳು ಆಗಿರುತ್ತದೆ. ಆರೋಪಿಯವರು ನಿನ್ನನ್ನು ಮನೆ ಬಿಟ್ಟು ಹೋಗದೇ ಇದ್ದರೆ ಚಿನ್ನವನ್ನು ಕೇಳಿದರೆ ಸಾಯಿಸಿಬಿಡುತ್ತೇನೆ ಎಂದು ಬೆದರಿಕೆ ಹಾಕುತ್ತಿದ್ದರು.

ನಾನು ಚಿನ್ನಾಭರಣಗಳನ್ನು ಖರೀದಿಸಿದ ರಶೀದಿಗಳ ದೃಡೀಕರಿಸಿದ ಪ್ರತಿಗಳನ್ನು ಪೊಲೀಸಿನವರಿಗೆ ನೀಡಿರುತ್ತೇನೆ. ಸಾಕ್ಷಿಯವರು ಮುಂದುವರಿದು ಆಭರಣಗಳನ್ನು ಖರೀದಿಸಿದ ಮೂಲ ರಶೀದಿಗಳು ನನ್ನ ಬಳಿ ಇರುತ್ತದೆ ಎಂದು ಹೇಳುತ್ತಾರೆ.

**ಈ ಹಂತದಲ್ಲಿ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.